
## ಕಥೆ

ಅವನ ಗತಬದುಕಿನ ಘಟನೆಗಳು ಒಂದೊಂದಾಗಿ ಕನಸಿನಂತೆ ಸುರುಳಿಬಿಚ್ಚತೊಡಗಿದವು.

ಧೇನಿಸಿದ ಮಾತು, ಮಾಡಿಕೊಂಡ ಸಂಕಲ್ಪ ಕೊನೇರಿಗೆ ಮರೆತೇಹೋಯ್ತು. ರಾತ್ರಿಯಿಡೀ ನೆಮ್ಮದಿಯ ಬಗ್ಗೆಯೇ ಯೋಚಿಸಿದ. ಯೋಚಿಸಿದ. ಅರೇ ತಾನು ಅದೆಷ್ಟೋ ಬಾರಿ ಚಿರತೆ, ಕರಡಿ, ಹುಲಿಗಳ ಬಾಯ್ಗೆ ಆಹಾರವಾಗಬೇಕೆಂದಿದ್ದೆ. ಆ ಯೋಚನೆ ನನ್ನನ್ನೆಂದೂ ಹೆದರಿಸಿರಲಿಲ್ಲ. ಆದರೆ ಇಲ್ಲಿಗೆ ಬಂದ ಮೇಲೇಕೆ ನಾನು ನನ್ನ ಜೀವದ ಬಗ್ಗೆ ಅತಿಯಾಗಿ ಯೋಚಿಸುತ್ತಿರುವೆ, ಎಂದೂ ಇಲ್ಲದ ಜೀವಭಯ ಈಗೇಕೆ ತನ್ನನ್ನು ತೀವ್ರವಾಗಿ ಕಾಡುತ್ತಿದೆ. ಆ ಕರಡಿಬೆಟ್ಟದ ಮಹಾನುಭಾವನನ್ನು ಕಾಣಲು ಜೀವದ ಖಬರಿಲ್ಲದೆ ಈ ದುರ್ಗಮ ಕಾಡೊಳಗೆ ಒಂಟಿಯಾಗಿಯೇ ಬಂದೆ. ಈ ಕಾಡಿನ ಅಪಾಯ.. ಇಲ್ಲದಿರಲಿಲ್ಲ. ಬದುಕಿನ ನೆಮ್ಮದಿಯನ್ನು ದಕ್ಕಿಸಿಕೊಂಡು ಇಲ್ಲಿಂದ ವಾಪಸ್ಸು ಹೋಗುವಾಗಲಾದರೂ ನಾನು ಸುರಕ್ಷಿತವಾಗಿರುತ್ತೇನೆಂಬ ನಂಬಿಕೆ ಇದೆಯೇ. ಖಂಡಿತವಾಗಿಯೂ ಇಲ್ಲ. ಹೆಜ್ಜೆ ಹೆಜ್ಜೆಗೂ ಅಪಾಯವನ್ನು ಮೆಟ್ಟುತ್ತಲೇ ಹೋಗಬೇಕು. ಅದೃಷ್ಟ ಚೂರು ಹೆಚ್ಚುಕಮ್ಮಿಯಾದರೂ ತಾನು ಬದುಕುಳಿಯುದಿಲ್ಲ. ಜೀವ ಹೋದರೆ ಎಲ್ಲಿಯ ನೆಮ್ಮದಿ ಎಲ್ಲಿಯ ಸಂತೋಷ. ತಾನು ನನ್ನ ಬದುಕಿನ ಸಂತೋಷಕ್ಕಾಗಿ ಹೀಗೆ ಬೇರೆಯವರನ್ನು ಹುಡುಕಿಕೊಂಡು ಬಂದಿರೋದು ಹುಚ್ಚುತನವೇ. ಎಂದು ಮುಂತಾಗಿ ಯೋಚಿಸಿದ.

ಅವನೊಳಗಡಗಿದ ಬದುಕಿನ ಗುಟ್ಟುಗಳೀಗ ರಟ್ಟಾಗತೊಡಗಿದವು. ನೆಮ್ಮದಿ ಸಂತೋಷಕ್ಕಾಗಿ ಜೀವಹಿಡಿಯೋದೋ ಅಥವಾ ಗಟ್ಟಿಯಾಗಿ ಬದುಕಿದ ಮೇಲೆ ನೆಮ್ಮದಿ ಅರಸೋದೋ. ಮನಸ್ಸಿನಲ್ಲಿ ಬದುಕಿನ ಬಗ್ಗೆ ಇಂತಹ ವಿಚಿತ್ರ ಪ್ರಶ್ನೆಗಳು, ಯೋಚನೆಗಳು ಮತ್ತೆ ಮತ್ತೆ ಮೂಡಿ ಅವನ ಮನಸ್ಸನ್ನು ಅಲ್ಲೋಲಕಲ್ಲೋಲಗೊಳಿಸಿದವು. ಕಡೆಗೂ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಸಿಕ್ಕಂತೆ ಕೊನೇರಿಯ ಮನಸ್ಸು ನಿರುಮ್ಮಳವಾಗತೊಡಗಿತು. ಅವನ ಬಗ್ಗೆ ಅವನಿಗೆ ಎಂದಿಲ್ಲದ ಪ್ರೀತಿ ಕಾಳಜಿ ಮೂಡಿತು. ತಾನು ದೃಢವಾಗಿ ಜೀವಹಿಡಿಯಬೇಕು, ಅಚಲವಾಗಿ ಬದುಕಬೇಕೆಂದ. ಬದುಕು ಬಹಳ ಸುಂದರವಾಗಿದೆ ಎನಿಸಿತು. ಈಗ ಚುಮು ಚುಮು ಚಳಿಯ ಮಧ್ಯೇಯೂ



ಸೊಂಯ್ ಎಂದು ಬೀಸಿದ ತಂಗಾಳಿ ಅವನಿಗೆ ಸೋಕಿ ಮೈ ನವಿರೆದ್ದಿತು. ಇದಾದ ಘಳಿಗೆಯಲ್ಲೇ ಪಕ್ಕದಲ್ಲೆಲ್ಲೋ ಕಾಡುಕೋಳಿಯ ಕೂಗು.

ಬೆಳಗಾಯ್ತೆಂದುಕೊಂಡ ಕೊನೇರಿ ಬಂಧನದಲ್ಲಿದ್ದ ಪ್ರಾಣಿ ಬಿಡುಗಡೆಗೊಂಡು ಹೊರಬಂದಂತೆ ಪೊಟರೆಯಿಂದ ಹೊರಬಂದ. ಒಂದು ಬಾರಿ ಜೋರಾಗಿ ಆಕಳಿಸುತ್ತ ಮೈಮುರಿದ. ರಾತ್ರಿ ಯಾವ ಕಾಡುಪ್ರಾಣಿಯೂ ಅಲ್ಲಿ ಸುಳಿದಿರಲಿಲ್ಲವೆಂಬುದೇ ಅವನಿಗೆ ಅಚ್ಚರಿ. ಅದುವರೆಗೂ ಸಣ್ಣದಾಗಿ ಹನಿಯುತ್ತಿದ್ದ ಮಳೆಯೀಗ ಜೋರಾಗತೊಡಗಿತು. ಕೊನೇರಿ ಮುಚ್ಚಿದ ಕಣ್ಣುಗಳನ್ನು ತೆರೆದು ಮೇಲಕ್ಕೆ ನೋಡಿದ. ಆಗಸದಲ್ಲಿ ಖಟ್‌ಖಡಲ್... ಎಂಬ ಗುಡುಗಿನ ಸದ್ದಿನೊಂದಿಗೆ ಭೂಮ್ಯಾಕಾಶಕ್ಕೆ ವ್ಯಾಪಿಸಿದಂತೆ ಕೋಲ್ಮಿಂಚು ಹೊಡೆಯಿತು. ಆ ಮಿಂಚಿನ ಬೆಳಕಲಿ ಅವನಿಗೆ ಏನೋ ಕಂಡಂತೆನಿಸಿತು. ನಿಂತಲ್ಲಿಂದಲೇ ತನ್ನ ಕೈಗಳೆರಡನ್ನು ಮೇಲೆ ಮಾಡಿ ನನಗೆ ನೆಮ್ಮದಿಯ ದಾರಿ ಸಿಕ್ಕಿತು... ಎಂದು ಜೋರು ಕೂಗು ಹಾಕಿದ. ಮರಗಳ ಅಭೇದ್ಯ ಕೋಟೆಯನ್ನು ಭೇದಿಸಿ ಹೊರಟ ಅವನ ಧ್ವನಿ ಬೆಟ್ಟದಂಚು ತಲುಪಿತು. ಒಡನೇ ಕೊನೇರಿ ಶಿಬಿರದ ದಾರಿ ಹಿಡಿದು ನಡೆಯತೊಡಗಿದ. ಅವನ ಕಳೆಗುಂದಿದ ಮುಖದಲ್ಲೀಗ ಎಂದೂ ಇಲ್ಲದ ನಿರಾಳತೆ ಮತ್ತು ನಗು ಕಾಣಿಸುತ್ತಿತ್ತು. ●